# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ ಸಕಲೇಶಪುರ

**ವಿಷಯ-ಕನ್ನಡ** **ತರಗತಿ -6**

## 7 ನೇ ತರಗತಿ ಸೇತುಬಂಧಕ್ಕೆ ಬುನಾದಿ ಸಾಮರ್ಥ್ಯಗಳು

**ಶಾಲೆಯ ಹೆಸರು:-**

---

1. ಕನ್ನಡ ವರ್ಣಮಾಲೆಯನ್ನು ವರ್ಗೀಕರಿಸಿರುವ ರೀತಿಯನ್ನು ತಿಳಿಯುವರು.
2. ಗುಣಿತಾಷರವನನ್ನು ಬಿಡಿಸಿ ಬರೆಯುವರು.
3. ವಾಕ್ಯದಲ್ಲಿ ಕರ್ತೃ, ಕರ್ಮ, ಕ್ರಿಯಾಪದವನ್ನು ಗುರುತಿಸುವುದು.
4. ಪ್ರಾಸ ಪದಗಳನ್ನು ಗುರುತಿಸುವುದು.
5. ಕೊಟ್ಟಿರುವ ಪದಗಳನ್ನು ಶಬ್ದಕೋಶದಲ್ಲಿರುವಂತೆ 'ಅ' ಕಾರಾದಿಯಾಗಿ ಬರೆಯುವರು.
6. ಸೂಕ್ತ ಲೇಖನ ಚಿಹ್ನೆ ಬಳಸಿ ವಾಕ್ಯ ಗುರುತಿಸುವುದು.
7. ಮುದ್ರಿತ ವಿಷಯಗಳನ್ನು ಓದಿ ಕೇಳಿದ ಪ್ರಶ್ನೆಗಳನ್ನು ಉತ್ತರಿಸುವುದು.
8. ವಾಕ್ಯದಲ್ಲಿ ಗುಣವಿಶೇಷಣ ಪದವನ್ನು ಗುರುತಿಸುವುದು.
9. ಪದಪುಂಜ, ನುಡಿಗಟ್ಟು ಮತ್ತು ನಾಣ್ಣುಡಿಗಳನ್ನು ಓದಿ ಅರ್ಥಮಾಡಿಕೊಳ್ಳುವುದು.
10. ವಿವಿಧ ನಮೂನೆಯ ಉಭಯ ಕುಶಲೋಪರಿ ಪತ್ರ & ಪ್ರವಾಸ ಲೇಖನಗಳನ್ನು ಬರೆಯುವುದು.

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ ಸಕಲೇಶಪುರ

**ವಿಷಯ-ಕನ್ನಡ** **ತರಗತಿ -6**

## 7 ನೇ ತರಗತಿ ಸೇತುಬಂಧಕ್ಕೆ ಪೂರ್ವಪರೀಕ್ಷೆ

**ಶಾಲೆಯ ಹೆಸರು:-** **ವಿದ್ಯಾರ್ಥಿ ಹೆಸರು:-**

---

ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯನುಸಾರ ಉತ್ತರ ಬರೆಯಿರಿ

1.ಕ, ಉ, ಪ, ಅ, ರ, ಇ, ಸ, ಗ, ಮ, ಋ, ಢ, ಎ, ಊ, ಒ, ಡ, ಆ ಈ ಅಕ್ಷರಗಳಲ್ಲಿ ಹ್ರಸ್ವ ಸ್ವರಗಳನ್ನು ಆರಿಸಿ ಬರೆಯಿರಿ.

2.ಚೆಲ್ಲಾಪಿಲ್ಲಿ - ಈ ಪದದಲ್ಲಿರುವ ಗುಣಿತಾಕ್ಷರಗಳನ್ನು ಬಿಡಿಸಿ ಬರೆಯಿರಿ.

3.ಹಸು ಹುಲ್ಲನ್ನು ತಿಂದಿತು. - ಈ ವಾಕ್ಯದಲ್ಲಿರುವ ಕರ್ತೃ. ಕರ್ಮ, ಕ್ರಿಯಾಪದಗಳನ್ನು ಗುರುತಿಸಿ ಬರೆಯಿರಿ.

4.ಉತ್ತಮರ ಗೆಳೆತನ ಪುತ್ಥಳಿ ಬಂಗಾರ
ಮತಿ ಹೀನರ ಗೆಳೆತನ ಮಾಡಿದರೆ
ಹಿತ್ತಾಳಿಗಿಂತ ಬಲುಹೀನ.

**ಈ ಪದ್ಯ ಭಾಗವನ್ನು ಗಮನವಿಟ್ಟು ಓದಿ ಇದರಲ್ಲಿರುವ ಪ್ರಾಸಪದವನ್ನು ಬರೆಯಿರಿ.**

5.ಕಪ್ಪು, ಕೆಂಪು, ಕುಂಕುಮ, ಕಾಗೆ, ಕನಕ,

[ಕೊಟ್ಟಿರುವ ಪದಗಳನ್ನು ಶಬ್ದಕೋಶದಲ್ಲಿರುವಂತೆ 'ಅ' ಕಾರಾದಿಮಾಗಿ ಬರೆಯಿರಿ].

6. ರಾಮಣ್ಣನ ತೋಟದಲ್ಲಿ ಮಾವು ಹಲಸು ಸೇಬು ದ್ರಾಷಿ ಕಿತ್ತಳೆ ಬಾಳೆ ಸೀಬೆ ಕಲ್ಲಂಗಡಿ ಮತ್ತು ದಾಳಿಂಬೆ

ಹಣ್ಣುಗಳಿದ್ದವು

[ಈ ವಾಕ್ಯಕ್ಕೆ ಲೇಖನ ಚಿಹ್ನೆ ಬಳಸಿ ವಾಕ್ಯ ಪೂರ್ಣಮಾಡಿರಿ.]

7.ಡಾ. ಅನುಪಮಾ ನಿರಂಜನ ಅವರು ೧೯೩೪ ಮೇ ೧೭ ರಂದು ತೀಥಹಳ್ಳಿಯಲ್ಲಿ ಜನಿಸಿದರು. ಅನುಪಮಾ ಅವರಿಗೆ

ತಂದೆ-ತಾಯಿ ಕೊಟ್ಟ ಹೆಸರು ವೆಂಕಟ ಲಕ್ಷ್ಮಿ. ವೈದ್ಯಕೀಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸಿವುದರ ಜೊತೆ-ಜೊತೆಗೇನಾವರು ಕನ್ನಡದಲ್ಲಿ ಸಾಹಿತ್ಯರಚನೆಯನ್ನು ಮಾಡಿದರು.

[ಈ ಮೇಲಿನ ಪರ್ಯವನ್ನು ಓದಿಕೊಂಡು ಈ ಪ್ರಶ್ನೆಗೆ ಉತ್ತರಿಸಿ.
* ಅನುಪಮಾರವರಿಗೆ ತಂದೆ-ತಾಯಿಕೊಟ್ಟ ಹೆಸರು ಯಾವುದು?

8.ವಿನೋದನು ಜಾಣ ಹುಡುಗ. [ಈ ವಾಕ್ಯದಲ್ಲಿರುವ ಗುಣವಿಶೇಷಣ ಯಾವುದು]

9.ಶಾಲೆಯ ಮೈದಾನದಲ್ಲಿ ಆಕಸ್ಮಿಕವಾಗಿ ಬಂದ ಆನೆಯನ್ನು ನೋಡಿದ ಮಕ್ಕಳು ಕಾಲಿಗೆ ಬುದ್ಧಿ ಹೇಳಿದರು

[ಈ ವಾಕ್ಯದಲ್ಲಿರುವ ನುಡಿಗಟ್ಟು ಯಾವುದು]

10.ದೊಡ್ಡಪ್ಪನಿಗೆ ಪತ್ರ ಬರೆಯುವಾಗ ಬಳಸಬೇಕಾದ ಸಂಬೋಧನ ಪದ ಯಾವುದು.?

# ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಛೇರಿ ಹಾಗೂ ಕ್ಷೇತ್ರ ಸಂಪನ್ಮೂಲ ಕೇಂದ್ರ ಸಕಲೇಶಪುರ

**ವಿಷಯ-ಕನ್ನಡ** **ತರಗತಿ -6**

## 7 ನೇ ತರಗತಿ ಸೇತುಬಂಧಕ್ಕೆ ಸಾಫಲ್ಯ ಪರೀಕ್ಷೆ

**ಶಾಲೆಯ ಹೆಸರು:-** **ವಿದ್ಯಾರ್ಥಿ ಹೆಸರು:-**

---

ಈ ಕೆಳಗಿನ ಪ್ರಶ್ನೆಗಳಿಗೆ ಸೂಚನೆಯನುಸಾರ ಉತ್ತರ ಬರೆಯಿರಿ.

1.ಯ, ಲ, ವ, ನ, ಸ, ಣ, ಮ, ಫ, ಐ, ಙ, ಔ, ಅಂ, ಞ. ಈ ಅಕ್ಷರಗಳಲ್ಲಿ ಅನುನಾಸಿಕ ಅಕ್ಷರಗಳನ್ನು ಆರಿಸಿ ಬರೆಯಿರಿ.

2.ಹೊನ್ನವಳ್ಳಿ ಈ ಪದದಲ್ಲಿರುವ ಗುಣಿತಾಕ್ಷರಗಳನ್ನು ಬಿಡಿಸಿ ಬರೆಯಿರಿ.

3.ಶಿಕ್ಷಕರು ಪಾಠವನ್ನು ಮಾಡಿದರು. ಈ ವಾಕ್ಯದಲ್ಲಿರುವ ಕ್ರಿಯಾಪದ ಯಾವುದು?

4.ನೀರವ್ವ ಗಂಗವ್ವ
ಮಳಿಯಾಗಿ ಬಾರವ್ವ
ಹೊಳಿಯಾಗಿ ಹರಿಯವ್ವ

[ಈ ಮೇಲಿನ ಪದ್ಯ ಭಾಗವು ಯಾವ ಪ್ರಾಸಕ್ಕೆ ಉದಾಹರಣೆಯಾಗಿದೆ.]

5.ಮನಸ್ಸು, ಮಂತ್ರಾಲಯ, ಮನರಂಜನೆ, ಮಹಿಮೆ, ಮಜ್ಜಿಗೆ.

[ಕೊಟ್ಟಿರುವ ಪದಗಳನ್ನು ಶಬ್ದಕೋಶದಲ್ಲಿರುವಂತೆ 'ಅ' ಕಾರಾದಿಯಾಗಿ ಬರೆಯಿರಿ.]

6.ಆಹಾ ಎಂಥ ಸುಂದರ ದೃಶ್ಯ.

[ಈ ವಾಕ್ಯಕ್ಕೆ ಸೂಕ್ತ ಲೇಖನ ಚಿಹ್ನೆ ಬಳಸಿ ವಾಕ್ಯ ಪೂರ್ಣ ಮಾಡಿರಿ.]

7.ಡಾ. ರಾಜಕುಮಾರ್ ಅವರು ೧೯೨೯ರ ಏಪ್ರಿಲ್ ೨೪ ರಂದು ಜನಿಸಿದರು. ಚಾಮರ್ಜನಗರದಿಂದ ಹನ್ನೆರಡು ಮೈಲಿ ದೂರದಲ್ಲಿರುವ ತಾಳವಾಡಿ ಪಕ್ಕದ ಗಜನೂರು ಇವರ ಹುಟ್ಟೂರು. ಗಜನೂರು ಲಕ್ಷ್ಮಮ್ಮನವರ ತವರೂರು ಸಿಂಗನಲ್ಲೂರು ಪುಟ್ಟಸ್ವಾಮಯ್ಯನವರ ಮೂಲಸ್ಥಳ.

[ಈ ಮೇಲಿನ ಪಠ್ಯವಸ್ತುವನ್ನು ಓದಿಕೊಂದು ಈ ಕೆಳಗಿನ ಪ್ರಶ್ನೆಗೆ ಉತ್ತರಿಸಿ.]

8.* ಲಕ್ಷ್ಮನವರ ತವರುರು ಯಾವುದು?

9.ಅರ್ಜುನನು ಬುದ್ದಿವಂತ ಹುದುಗ.

[ಈ ವಾಕ್ಯದಲ್ಲಿರುವ ಗುಣವಿಶೇಷಣ ಯಾವುದು]

10.ತಾಯಿಗೆ ಪತ್ರವನ್ನು ಬರೆಯುವಾಗ ಬಳಸಬೇಕಾದ ಸಂಬೋಧನ ಪದ ಯಾವುದು?